# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1280 |
| ಸದಸ್ಯರ ಹೆಸರು | ಶ್ರೀ ಮಧು ಜಿ.ಮಾದೇಗೌಡ |
| ಉತ್ತರಿಸುವ ದಿನಾಂಕ | 17.12.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

********

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ವ್ಯಾಪ್ತಿಯಲ್ಲಿರುವ ದೇವಾಲಯಗಳ (ಪ್ರವರ್ಗ 'ಎ', 'ಬಿ' ಮತ್ತು 'ಸಿ') ಒಟ್ಟು ಸಂಖ್ಯೆ ಎಷ್ಟು; ಇವುಗಳಿಂದ ವಾರ್ಷಿಕವಾಗಿ ಸಂಗ್ರಹವಾಗುತ್ತಿರುವ ಆದಾಯ ಎಷ್ಟು; ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ಬಂದಂತಹ ಆದಾಯ ಎಷ್ಟು; (ವರ್ಷವಾರು ಮಾಹಿತಿ ನೀಡುವುದು) | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು **34566** ದೇವಾಲಯಗಳಿವೆ. ಸದರಿ ದೇವಸ್ಥಾನಗಳ ಪ್ರವರ್ಗವಾರು ಸಂಖ್ಯೆಯ ವಿವರ ಈ ಕೆಳಕಂಡಂತಿರುತ್ತದೆ. |

| ಕ್ರ.ಸಂ. | ಪ್ರವರ್ಗ | ಸಂಖ್ಯೆ |
|---|---|---|
| 1 | ಎ | 205 |
| 2 | ಬಿ | 193 |
| 3 | ಸಿ | 34168 |
| | **ಒಟ್ಟು** | **34566** |

ರಾಜ್ಯದ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ಪ್ರವರ್ಗ 'ಎ' ಮತ್ತು 'ಬಿ' ಸಂಸ್ಥೆಗಳಿಂದ ಸಂಗ್ರಹವಾಗಿರುವ ವಾರ್ಷಿಕ ಆದಾಯ ಮತ್ತು ಕಳೆದ 3 ವರ್ಷಗಳಿಂದ ಸಂಗ್ರಹವಾದ ಆದಾಯ ಮೊತ್ತ ವಿವರ ಈ ಕೆಳಕಂಡಂತಿದೆ:

| ಕ್ರ. ಸಂ. | ವರ್ಷ | ರೂ.ಲಕ್ಷಗಳಲ್ಲಿ | | |
|---|---|---|---|---|
| | | ಪ್ರವರ್ಗ 'ಎ' | ಪ್ರವರ್ಗ 'ಬಿ' | ಒಟ್ಟು |
| 1 | 2022-23 | 67555.05 | 3331.98 | 70887.03 |
| 2 | 2023-24 | 74391.68 | 3481.81 | 77873.49 |
| 3 | 2024-25 | 79838.52 | 3661.83 | 83500.35 |

ಒಟ್ಟು 25171 ಪ್ರವರ್ಗ 'ಸಿ' ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ತಸ್ತೀಕ್ ಮೊತ್ತವನ್ನು ಹಾಗೂ ತಸ್ತೀಕ್ ಪಡೆಯದೇ ಇರುವ ಒಟ್ಟು 3721 ದೇವಾಲಯಗಳಿಗೆ ವಾರ್ಷಿಕ ರೂ.72,000/-ಗಳ ವರ್ಷಾಸನವನ್ನು ನೀಡಲಾಗುತ್ತಿದ್ದು, ಇದು ಆ ದೇವಾಲಯಗಳ ವಾರ್ಷಿಕ ಆದಾಯವಾಗಿರುತ್ತದೆ.

| | ಪ್ರಶ್ನೆ | ಉತ್ತರ |
|---|---|---|
| ಆ) | ಈ ಪೈಕಿ ಅತಿ ಹೆಚ್ಚು ವಾರ್ಷಿಕ ವರಮಾನ ಹೊಂದಿರುವ ಹತ್ತು ಮುಜರಾಯಿ ದೇವಾಲಯಗಳು ಯಾವುವು; (ಹಿಂದಿನ 3 ಆರ್ಥಿಕ ವರ್ಷಗಳಿಗೆ ಸಂಬಂಧಿಸಿದಂತೆ ಈ ದೇಗುಲಗಳು ಮತ್ತು ಅವುಗಳ ಆದಾಯ ವಿವರ ನೀಡುವುದು) | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಹೆಚ್ಚಿನ ವರಮಾನ ಹೊಂದಿರುವ ಹತ್ತು ಪ್ರಮುಖ ದೇವಾಲಯಗಳು ಕೆಳಕಂಡಂತಿವೆ.<br>1. ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಸುಬ್ರಹ್ಮಣ್ಯ, ಕಡಬ ತಾಲ್ಲೂಕು, ದ.ಕ. ಜಿಲ್ಲೆ.<br>2. ಶ್ರೀ ಮೂಕಾಂಬಿಕಾ ದೇವಾಲಯ, ಕೊಲ್ಲೂರು, ಬೈಂದೂರು ತಾಲ್ಲೂಕು, ಉಡುಪಿ ಜಿಲ್ಲೆ.<br>3. ಶ್ರೀ ಚಾಮುಂಡೇಶ್ವರಿ ದೇವಾಲಯ, ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಾಮುಂಡಿಬೆಟ್ಟ, ಮೈಸೂರು.<br>4. ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಾಲಯ, ನಂಜನಗೂಡು, ಮೈಸೂರು ಜಿಲ್ಲೆ. |

| ಪ್ರಶ್ನೆ | | ಉತ್ತರ |
|---|---|---|
| | | 5. ಶ್ರೀ ರೇಣುಕಾ ಯಲ್ಲಮ್ಮ ದೇವಾಲಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಸವದತ್ತಿ ತಾಲ್ಲೂಕು, ಬೆಳಗಾವಿ ಜಿಲ್ಲೆ.<br>6. ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ ದೇವಾಲಯ, ಎಡೆಯೂರು, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ.<br>7. ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಹುಲಿಗಿ ಗ್ರಾಮ, ಕೊಪ್ಪಳ ಜಿಲ್ಲೆ.<br>8. ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ಬ್ರಹ್ಮಾವರ ತಾಲ್ಲೂಕು, ಉಡುಪಿ ಜಿಲ್ಲೆ.<br>9. ಶ್ರೀ ಘಾಟಿ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಅಭಿವೃದ್ಧಿ ಪ್ರಾಧಿಕಾರ, ಎಸ್. ಎಸ್.ಘಾಟಿ. ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.<br>10. ಶ್ರೀ ಬನಶಂಕರಿ ದೇವಾಲಯ, ಎಸ್.ಕರಿಯಪ್ಪ ರಸ್ತೆ, ಬೆಂಗಳೂರು ನಗರ ಜಿಲ್ಲೆ.<br><br>ದೇವಸ್ಥಾನ/ ಆದಾಯದ ವಿವರವನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಇ) | ಭಕ್ತರ ಮೂಲಕ ದೇವಾಲಯಗಳಿಗೆ ಹೆಚ್ಚಿನ ಆದಾಯದ ಹರಿವಿದ್ದರೂ ಕುಡಿಯುವ ನೀರು, ನೆರಳು, ವಸತಿ, ಊಟ, ಸ್ವಚ್ಚತೆ ಸೇರಿದಂತೆ ಅವಶ್ಯ ಮೂಲಸೌಕರ್ಯಗಳಿಲ್ಲದೆ ಭಕ್ತರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳು / ಸಂಸ್ಥೆಗಳಿಗೆ ಬರುವ ಭಕ್ತಾದಿಗಳು/ ಸಾರ್ವಜನಿಕರಿಗೆ ಅವಶ್ಯಕತೆಗನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.<br>i. ಪ್ರಮುಖ ದೇವಾಲಯಗಳ ಭಕ್ತಾದಿಗಳಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ.<br>ii. ಇಲಾಖಾ ವ್ಯಾಪ್ತಿಗೆ ಒಳಪಡುವ ದೇವಾಲಯಗಳ ಸಮಗ್ರ ಅಭಿವೃದ್ಧಿಯನ್ನು ಆಯಾಯಾ ದೇವಾಲಯಗಳ ನಿಧಿಯಿಂದ ವೆಚ್ಚ ಭರಿಸಿ ಮತ್ತು ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.<br>iii. ದೇವಾಲಯಗಳಿಗೆ ಭೇಟಿ ನೀಡುವ ಭಕ್ತಾದಿಗಳಿಗೆ ಮಾರ್ಗದರ್ಶನ ನೀಡುವ ನಾಮಫಲಕ ಅಳವಡಿಸಲಾಗಿರುತ್ತದೆ.<br>iv. ದೇವಾಲಯಗಳಿಗೆ ಭೇಟಿ ನೀಡುವ ಹಿರಿಯ ನಾಗರೀಕರಿಗೆ ಪ್ರತ್ಯೇಕ ಸರದಿ ಸಾಲಿನಲ್ಲಿ ದರ್ಶನದ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.<br>v. ವಿಶೇಷ ಚೇತನರಿಗೆ ನೇರ ದರ್ಶನದ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ ಮತ್ತು ವಿಲ್‌ಛೇರ್ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.<br>vi. ಭಕ್ತಾದಿಗಳು ವಿಶ್ರಮಿಸಲು ಸೂಕ್ತ ಆಸನದ ವ್ಯವಸ್ಥೆ ಮತ್ತು ನೆರಳಿನ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ ಮತ್ತು ಸೂಕ್ತ ಬೆಳಕಿನ ವ್ಯವಸ್ಥೆಗಾಗಿ ಹೈಮಾಸ್ಕ್ ಲ್ಯಾಂಪ್‌ಗಳನ್ನು ಅಳವಡಿಸಲಾಗಿದೆ.<br>vii. ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವ ಸಲುವಾಗಿ RO Plant(ಶುದ್ಧ ಕುಡಿಯುವ ನೀರಿನ ಘಟಕ)ಗಳನ್ನು ಅಳವಡಿಸಲಾಗಿರುತ್ತದೆ.<br>viii. ಪ್ರಮುಖ ದೇವಾಲಯಗಳಲ್ಲಿ ಅನ್ನ ದಾಸೋಹ ವ್ಯವಸ್ಥೆ |
| ಈ) | ಬಂದಿದ್ದಲ್ಲಿ, ಭಕ್ತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಕಳೆದ 3 ವರ್ಷಗಳಲ್ಲಿ ಅಭಿವೃದ್ಧಿ ಕೆಲಸಗಳಿಗಾಗಿ ಭರಿಸಿರುವ ವೆಚ್ಚ ಎಷ್ಟು; ಯಾವ ಯಾವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ? (ವಿವರ ನೀಡುವುದು) | |

| ಪ್ರಶ್ನೆ | ಉತ್ತರ |
|---|---|

ಕಲ್ಪಿಸಲಾಗಿರುತ್ತದೆ.

ix. ದೇವಾಲಯಕ್ಕೆ ಬರುವ ಭಕ್ತಾದಿಗಳಿಗೆ ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

x. ದೇವಾಲಯದ ಭದ್ರತಾ ದೃಷ್ಟಿಯಿಂದ CC TV ಗಳನ್ನು ಅಳವಡಿಸಲಾಗಿರುತ್ತದೆ.

xi. ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ತಾಯಂದಿರು ಹಾಲುಣಿಸಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಹಾಗೂ ಒಂದು ವರ್ಷದೊಳಗಿನ ಚಿಕ್ಕ ಮಕ್ಕಳಿರುವ ತಾಯಂದಿರಿಗೆ ನೇರ ದರ್ಶನದ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.

ಮೇಲ್ಕಂಡ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಕಲ್ಪಿಸಲಾಗಿದ್ದು, ಹೆಚ್ಚುವರಿ ಮೂಲಭೂತ ಸೌಕರ್ಯದ ಅವಶ್ಯಕತೆ ಇದ್ದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಗಳು ಸ್ವೀಕೃತವಾದಲ್ಲಿ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ದೇವಾಲಯದ ನಿಧಿಯಿಂದ ಕೆಲವೊಂದು ಅಭಿವೃದ್ಧಿ ಕಾಮಗಾರಿಗಳಿಗೆ ಮೊತ್ತವನ್ನು ಭರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಕಳೆದ 3 ವರ್ಷಗಳಲ್ಲಿ ಪ್ರವರ್ಗ 'ಎ' ಮತ್ತು 'ಬಿ' ವರ್ಗದ ದೇವಾಲಯಗಳಿಗೆ ಬರುವ ಭಕ್ತರಿಗೆ ಪ್ರಸಾದ/ ಅನ್ನದಾಸೋಹ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಮೇಲಿನಂತೆ ಇತರೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ವೆಚ್ಚ ಭರಿಸಲಾಗಿದೆ:

| ಕ್ರ. ಸಂ. | ವರ್ಷ | ರೂ.ಲಕ್ಷಗಳಲ್ಲಿ | | |
|---|---|---|---|---|
| | | ಪ್ರವರ್ಗ 'ಎ' | ಪ್ರವರ್ಗ 'ಬಿ' | ಒಟ್ಟು |
| 1 | 2022-23 | 51346.95 | 2579.84 | 53926.79 |
| 2 | 2023-24 | 55084.61 | 2447.57 | 57532.18 |
| 3 | 2024-25 | 58323.48 | 2663.75 | 60987.23 |

ಸಂಖ್ಯೆ: ಕಂಇ 243 ಮುಸಪ್ರ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

12808 ಅನುಬಂಧ-3

## ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಡುವ ಪ್ರಮುಖ 10 ದೇವಸ್ಥಾನಗಳ ಕಳೆದ 3 ವರ್ಷದ ಸಾಲಿನ ಆದಾಯ, ವಿವರ

| ಕ್ರ ಸಂ | ದೇವಸ್ಥಾನದ ಹೆಸರು ವಿಳಾಸ | 2022-23 ಆದಾಯ (ರೂ.ಲಕ್ಷಗಳಲ್ಲಿ) | 2023-24 ಆದಾಯ (ರೂ.ಲಕ್ಷಗಳಲ್ಲಿ) | 2024-25ಆದಾಯ (ರೂ.ಲಕ್ಷಗಳಲ್ಲಿ) |
|---|---|---|---|---|
| 1 | ಶ್ರೀ ಕುಕ್ಕೆ ಸುಬ್ರಹ್ಮಣ್ಯ ದೇವಾಲಯ, ಸುಬ್ರಹ್ಮಣ್ಯ, ಕಡಬ ತಾಲ್ಲೂಕು ದ. ಕ ಜಿಲ್ಲೆ | 12364.49 | 14601.53 | 15595.19 |
| 2 | ಶ್ರೀ ಮೂಕಾಂಬಿಕಾ ದೇವಾಲಯ, ಕೊಲ್ಲೂರು, ಬೈಂದೂರು ತಾಲ್ಲೂಕು ಉಡುಪಿ ಜಿಲ್ಲೆ | 5947.55 | 6823.06 | 7193.38 |
| 3 | ಶ್ರೀ ಚಾಮುಂಡೇಶ್ವರಿ ದೇವಾಲಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಚಾಮುಂಡಿ ಬೆಟ್ಟ ಮೈಸೂರು | 5240.58 | 5667.00 | 5068.45 |
| 4 | ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ ನಂಜನಗೂಡು ತಾಲ್ಲೂಕು ಮೈಸೂರು ಜಿಲ್ಲೆ | 2671.90 | 3036.77 | 3612.87 |
| 5 | ಶ್ರೀ ರೇಣುಕಾಯಲ್ಲಮ್ಮ ದೇವಾಲಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಯಲ್ಲಮ್ಮನಗುಡ್ಡ, ಸವದತ್ತಿ ತಾಲ್ಲೂಕು | 2252.54 | 2580.14 | 2995.14 |
| 6 | ಶ್ರೀ ಸಿದ್ಧಲಿಂಗೇಶ್ವರ ದೇವಾಲಯ, ಎಡೆಯೂರು, ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ | 3648.33 | 3549.76 | 2982.59 |
| 7 | ಶ್ರೀ ಹುಲಿಗೆಮ್ಮ ದೇವಾಲಯ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹುಲಿಗಿ, ಕೊಪ್ಪಳ ತಾಲ್ಲೂಕು. | 1427.01 | 1629.72 | 1730.01 |
| 8 | ಶ್ರೀ ದುರ್ಗಾಪರಮೇಶ್ವರಿ ದೇವಾಲಯ, ಮಂದಾರ್ತಿ, ಬ್ರಹ್ಮಾವರ ತಾಲ್ಲೂಕು | 1455.65 | 1527.20 | 1654.37 |
| 9 | ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ, ಅಭಿವೃದ್ಧಿ ಪ್ರಾಧಿಕಾರ ಎಸ್.ಎಸ್. ಘಾಟಿ, ದೊಡ್ಡಬಳ್ಳಾಪುರ ತಾಲ್ಲೂಕು | 1225.70 | 1273.29 | 1331.53 |
| 10 | ಶ್ರೀ ಬನಶಂಕರಿ ದೇವಸ್ಥಾನ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು | 595.60 | 1195.39 | 1186.73 |
| | ಒಟ್ಟು | 36829.35 | 41883.86 | 43350.26 |

ಆಯುಕ್ತರ ಪರವಾಗಿ,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮಾದಾಯ ದತ್ತಿಗಳ ಇಲಾಖೆ,
[illegible]